ಶ್ರೀ ಕೆ.ಎಚ್. ಪಾಟೀಲ್.— ಇಂಥಾ ಸಂದರ್ಭದಲ್ಲಿ ಮಾಡಿದ್ದೀವೆ ಎನ್ನುವುದನ್ನು ಹೇಳಿದರೆ ಆದರ ಬಗ್ಗೆ ಉತ್ತರ ಹೇಳಬಹುದು. ನಾನು ತಿಪಟೂರಿಗೆ ಹೋದಾಗ ಕೆಲವು ಕಾಳಸಂತೆಕೋರರನ್ನು ಕಾರ್ಯಕರ್ತರು ತೋರಿಸಿಕೊಟ್ಟರು. ಸರಿಯಾದಂತಹ ಕಾರ್ಯಕರ್ತರು ಯಾರು ಸಮಿತಿಗಳಲ್ಲಿ ಇರಲಿಲ್ಲ ಅವರಿಗೆ ಬದಲಾಗಿ ಮತ್ತೊಮ್ಮೆ ಜೇರೆಯವರನ್ನು ನೇಮಿಸಬೇಕು ಎಂದು ನೇಮಿಸಿದೆ.

ಶ್ರೀ ಎಂ.ಎಂ. ಸಜ್ಜನ್.—ಸಲಹಾ ಸಮಿತಿಯವರು ತಹಸೀಲ್ದಾರರಿಗೆ, ಅಸಿಸ್ಟೆಂಟ್ ಕಮಿಷನರಿಗೆ ಕೆಲವು ಸಲಹೆಗಳನ್ನು ಕೊಟ್ಟರೂ ಕೂಡ ಅವುಗಳನ್ನು ಆಚರಣೆಗೆ ತರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಏನಾದರೂ ಕಾಯಿದೆ ಕಾನೂನು ಇದೆಯೇ ?

ಶ್ರೀ ಕೆ.ಎಚ್. ಪಾಟೀಲ್.—ಇದು ಅಡ್ವೈಜರಿ ನೇಚರ್ ಸಮಿತಿ ಎಂದು ನಾನು ಹೇಳಿದ್ದೇನೆ. ಕರಾರುವಾಕ್ಕಾಗಿ ಎಲ್ಲವನ್ನೂ ಅಮಲಿನಲ್ಲಿ ತರುವುದಕ್ಕೆ ಆಗುವುದಿಲ್ಲ. ಸಲಹಾ ಸಮಿತಿಯವರು ಹೇಳಿದಂತಹ ಸಲಹೆಗಳು ಸೂಕ್ತವಾಗಿದ್ದು ಅವುಗಳನ್ನು ಆಫೀಸರು ಆಚರಣೆಗೆ ತರುವುದು ತಪ್ಪಿದರೆ ಅಂಥಾದ್ದನ್ನು ನನ್ನ ಗಮನಕ್ಕೆ ತಂದರೆ ಆ ಆಫೀಸರು ಕೈಗೊಂಡ ಕ್ರಮವನ್ನು ನೋಡಿ, ಸಲಹಾ ಸಮಿತಿಯವರು ಕೊಟ್ಟಂಥಹ ಸಲಹೆಗಳನ್ನು ನೋಡಿ ಸಲಹಾ ಸಮಿತಿಯವರು ಕೊಟ್ಟಂಥ ಸಲಹೆಗಳು ಯೋಗ್ಯವಾಗಿದ್ದರೆ ಅವುಗಳನ್ನು ಬೆಂಬಲಿಸುತ್ತೇನೆ. ಅಧಿಕಾರಿಗಳೇ ಮಾಡಿದ್ದು ಸೂಕ್ತ ಇದ್ದರೆ ಅದನ್ನು ಬೆಂಬಲಿಸುತ್ತೇನೆ.

ಶ್ರೀ ಎಂ ಎಚ್. ಜಯಪ್ರಕಾಶನಾರಾಯಣ.—ಸಿರಸಿ ತಾಲ್ಲೂಕು ಆಹಾರ ಸಲಹಾ ಸಮಿತಿಗಳಿಗೆ ವ್ಯಾಪಾರ ಮಾಡತಕ್ಕ ಅಂಗಡಿಯವರನ್ನೂ, ಕಾಳಸಂತೆಕೋರರನ್ನು ಹೆಂಡತಿಯ ಹೆಸರಿನಲ್ಲಿ ಫೇರ್‌ಪ್ರೈಜ್ ಡಿಪೋ ಇಟ್ಟುಕೊಂಡಿರುವವರನ್ನು ಸೇರಿಸಿದ್ದಾರೆ. ಆದ್ದರಿಂದ ಸಾಮಾನ್ಯವಾಗಿ ಇಂಥಾ ಸಮಿತಿಗಳನ್ನು ಮಾಡುವಾಗ ಆಯಾ ಕ್ಷೇತ್ರದ ವಿಧಾನಸಭಾ ಸದಸ್ಯರ ಸಲಹೆಯನ್ನು ಪಡೆದು ನೇಮಕ ಮಾಡತಕ್ಕ ನೀತಿಯನ್ನು ಅನುಸರಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ವಿಧಾನಸಭಾ ಸದಸ್ಯರ ಸಲಹೆಯನ್ನು ತೆಗೆದುಕೊಂಡು ನೇಮಕ ಮಾಡಿದಂಥವುಗಳಲ್ಲಿಯೂ ಅನೇಕ ದೋಷಗಳು ಇವೆ. ಆದ್ದರಿಂದ ಸಮಿತಿಗಳನ್ನು ನೇಮಕ ಮಾಡುವಾಗ ಅವಿವೇಕ ಮತ್ತು ಅಕ್ರಮಗಳು ನಡೆಯಬಾರದು ಎಂದು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೇವೆ.

ಶ್ರೀ ಟಿ.ಎಂ. ಮಂಜುನಾಥ.—ಸರ್ಕಾರದಲ್ಲಿರತಕ್ಕ ಆಹಾರಧಾನ್ಯವನ್ನು ತಾಲ್ಲೂಕಂಗಳಿಗೆ ಹಂಚುತ್ತೇವೆ ಎಂದು ಹೇಳಿದ್ದೀರಿ, ನಮ್ಮ ತಾಲ್ಲೂಕಿನಲ್ಲಿ ಕೂಲಿಗಾರರು ಜಾಸ್ತಿ ಇದ್ದಾರೆ. ಅವರಿಗೆ ವ್ಯವಸಾಯದ ಜಮೀನು ಇಲ್ಲ. ಆದ್ದರಿಂದ ಸರ್ಕಾರದವರು ಕಳುಹಿಸತಕ್ಕ ಆಹಾರದಮೇಲೇ ಅವರು ನಿಂತಿರುತ್ತಾರೆ. ಆದ್ದರಿಂದ ದಯಮಾಡಿ ಎಲ್ಲಿ ಕೂಲಿಗಾರರು ಇದ್ದಾರೆ ಅಲ್ಲಿಗೆ ಹೆಚ್ಚಿಗೆ ಆಹಾರ ಧಾನ್ಯವನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ ಎಚ್. ಪಾಟೀಲ್.—ಕೂಲಿಗಾರರು ಒಂದೇ ಅಲ್ಲ, ಬಜಾರಿನಲ್ಲಿ ಸಮಾವದಲ್ಲಿ ಯಾವುದು ಸಿಕ್ಕುತ್ತದೆ, ಯಾವುದು ಸಿಕ್ಕುವುದಿಲ್ಲ ಎಂಬುದನ್ನೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಜನಗಳಿಗೆ ತೊಂದರೆಯಾಗದ ರೀತಿಯಲ್ಲಿ ಕೂಲಿಗಾರರು ಇರಲಿ ಅಥವಾ ಬೇರೆ ಯಾರೇ ಇರಲಿ ಆಹಾರದ ಕೊರತೆ ಇಲ್ಲದಂತೆ ಸರ್ಕಾರ ವ್ಯವಸ್ಥೆ ಮಾಡುತ್ತದೆ.

ALLEGATIONS AGAINST THE PRESIDENT T.M.C., SIRSI

410. SRI M. H. JAYAPRAKASH NARAYAN (Sirsi) —Will the Minister for Law and Municipal Administration be pleased to state. —

the action taken by the Divisional Commissioner, Belgaum on the memorandum of allegations presented on 2-11-1973 by some of the Municipal Council, Sirsi of North Kanara District ?

SRI D. K. NAIKAR (Minister for Law and Municipal Administration).—

The representation has been enquired into and filled since the allegations made by them are vague

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ – ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ಮನವಿಯ ಬಗ್ಗೆ ವಿಚಾರಣೆ ನಡೆಸಿ ನೀಡಿದ್ದ ದೂರುಗಳು ಅಸ್ಪಷ್ಟವಾಗಿದ್ದರಿಂದ ಆ ಬಗ್ಗೆ ಯಾವ ಕ್ರಮವನ್ನು ಕೈಕೊಳ್ಳದೆ ಅದನ್ನು ಕಟ್ಟಿಗೆ ಸೇರಿಸಲಾಗಿದೆ ಎಂದು ಹೇಳಿದ್ದೀರಿ, ಅಲ್ಲಿಯ ಡಿವಿಜನಲ್ ಕಮಿಷನರಿಗೆ ಪುರ ಸಭೆಯ ಸದಸ್ಯರು ೧೬ ಅಪಾದನೆಗಳನ್ನು ಸಲ್ಲಿಸಿದ್ದು ಆ ೧೬ ಆಪಾದನೆಗಳೂ ಅಸ್ಪಷ್ಟವಾಗಿವೆಯೇ ?

† ಶ್ರೀ ಡಿ. ಕೆ. ನಾಯ್ಕರ್.—ಅವರು ಮಾಡಿರತಕ್ಕ ೧೬ ಆಪಾದನೆಗಳು ಕೂಡ ಅಸ್ಪಷ್ಟ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಪುರಸಭೆಯ ಅಧ್ಯಕ್ಷರು ಪಣವನ್ನು ದುರುಪ ಯೋಗ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಡಿವಿಜನಲ್ ಕಮಿಷನರು ವಿಚಾರಣೆ ಮಾಡಿದ್ದಾರೆ. ಅದು ದುರುಪಯೋಗವಾಗಿದೆ ಎಂದು ಪರಿಗಣಿಸಲಾಗಿದೆಯೇ ಅಥವಾ ಏನೆಂದು ಪರಿಗಣಿಸಲಾಗಿದೆ ?

ಶ್ರೀ ಡಿ. ಕೆ. ನಾಯ್ಕರ್ —ಹಣ ದುರುಪಯೋಗವಾಗಿದೆ ಎನ್ನುವುದು ಸ್ಪಷ್ಟವಾಗಿಲ್ಲ. ಅವರು ಮಾಡಿರುವಂತಹ ಆಪಾದನೆಗಳು ಹೀಗಿವೆ

The following are the few samples of omission and commission of the president :

(1) Unnecessarily involving the Municipal Council into fruitless litigations ;

(2) Bringing pressure on the municipal staff to insure their lives through him in lieu of the Chief officer ;

(3) Diverting the municipal staff to outside areas ;

(4) Harassing the municipal staff to work from 9 A M. till 9 P. M.

There are no complaints filed by the President against the staff as such. It is the staff who have alleged that the president brought pressure on them and he took advantage of his position.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸರ್ಕಾರದ ದೃಷ್ಟಿಯಲ್ಲಿ ಮನವಿಯ ಬಗ್ಗೆ ವಿಚಾರಣೆ ನಡೆಸಿ ನೀಡಿದ್ದ ದೂರುಗಳು ಅಸ್ಪಷ್ಟವಾಗಿರಬಹುದು. ಆದಕ್ಕಾಗಿ ಅಲ್ಲಿ ಅನೇಕರು ಪುರಸಭೆಯ ಕೆಲವು ಸದಸ್ಯರನ್ನೂ ಮತ್ತು ಅಧ್ಯಕ್ಷರನ್ನು ಫೇರಾಪೊ ಮಾಡಿ ಚಳುವಳಿ ನಡೆಸಿದ್ದಾರೆ. ಆದುದರಿಂದ ಮುನಿಸಿಪಲ್ ಆಕ್ಟ್ ೩೧೦ನೇ ವಿಧೀಯ ಪ್ರಕಾರ ಅದರ ಒಂದು ಚೌಕಟ್ಟಿನಲ್ಲಿ ಮತ್ತೆ ವಿಚಾರಣೆಯನ್ನು ಸರ್ಕಾರದವರೇ ಮಾಡಿ ಅದನ್ನು ಪುನರ್ಪರಿಶೀಲನೆಮಾಡತಕ್ಕ ರೀತಿಯಲ್ಲಿ ಅಭಯವನ್ನು ಕೊಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಅಲಿಗೇಷನ್ಸ್ ಸ್ಪಷ್ಟವಾಗಿದ್ದಾಗ ೩೧೦ನೇ ಆರ್ಟಿಕಲ್ ಪ್ರಕಾರ ಕ್ರಮ ತೆಗೆದುಕೊಳ್ಳುವುದು ಬರುವುದಿಲ್ಲ. ಏನಾದರೂ ಮಿಸ್‌ಯೂಸ್ ಆಫ್ ಪವರ್ ಅಲ್ಲಿ ಆಗಿದೆಯೆಂದು ಧಾರಾಳವಾಗಿ ಹೇಳುವುದಾದರೆ, ಆಗ ಎವಿಡೆನ್ಸ್ ರಿಕಾರ್ಡ್ ಮಾಡಬೇಕಾಗುತ್ತದೆ. ಅಂತಹ ಒಂದು ಸಂದರ್ಭದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.